ದೇವಸ್ಥಾನಗಳ ಸುತ್ತಿ ಹರಕೆ ತೀರಿಸಿದೆವು. ಪೊಲೀಸರಿಗೆ ಹೇಳಿದ್ದನ್ನೇ ಹೇಳಿ ನನಗೂ ರೋಸಿ ಹೋಗಿತ್ತು. ಜಯಮ್ಮ ಮಾತ್ರ ಕೊಂಚವೂ ವಿಚಲಿತರಾಗಿರಲಿಲ್ಲ. ಮುಂದೊಂದು ದಿನ ಇದರಂತಹದ್ದೇ ಮತ್ತೊಂದು ಘಟನೆ ನಡೆಯಿತು.

ಇವರ ಮನೆಗೆ ಹಾಲು ಕೊಡಲು ಸಾಬರ ಹುಡುಗನೊಬ್ಬ ಬರುತ್ತಿದ್ದ. ಅವನು ಹಾದು ಬರುವ ಹಾದಿಯಲ್ಲಿ ಹುತ್ತವೊಂದಿತ್ತು. ಒಮ್ಮೆ ಸಂಜೆಯ ಹೊತ್ತಲ್ಲಿ ಹುತ್ತದ ಬಳಿ ಹರಿದಾಡುತ್ತಿದ್ದ ಹಾವನ್ನು ಕಂಡು ಆತ ಗಾಬರಿಬಿದ್ದು ಚೊಂಬಿನಲ್ಲಿದ್ದ ಹಾಲನ್ನು ಚೆಲ್ಲಿಕೊಂಡು ಸ್ವಲ್ಪವೇ ತಂದಿದ್ದ. ಜಯಮ್ಮ ವಿಚಾರಿಸಿದಾಗ ಹುಡುಗ, "ಇಸ್ಕಿ ಮಾಕಿ, ನಾಗರ್ ಹಾವು ಕಾಲ್ನಾಗೆ ಬಂದ್ಬಿಟ್ಟು ಅಕ್ಕ. ಹೆದ್ರಿಕೆ ಆಗಿ ದೂದ್ ಚೆಲ್ಕೊಂಡ್ ಬಿಟ್ಟೆ" ಎಂದು ಆತಂಕದಿಂದ ಹೇಳಿದ. ಗಾಬರಿ ಬಿದ್ದ ಜಯಕ್ಕ ಹುಡುಗನ ಕಾಲು ಪರೀಕ್ಷಿಸುತ್ತಾ, "ಎಲ್ಲಾನ ಕಚ್ಚಿಗಿಚ್ಚಿ ಬಿಡ್ತೇನೋ ಕಂದವ್ವ" ಎಂದು ತಾಯಿ ಪ್ರೀತಿ ತೋರಿದರು.

ಅವನು, "ಏನು ಆಗ್ಲಿಲ್ಲ ಅಕ್ಕ. ದೂದೆಲ್ಲಾ ಚೆಲ್ಲಿ ಲಾಸಾತು. ನಮ್ಮ ಅಮ್ಮಂಗೆ ಗೊತ್ತಾದ್ರೆ ಬೈತಾರೆ" ಎಂದು ಅಳತೊಡಗಿದ. "ಏಯ್ ಯಾಕ್ ಅಳ್ತಿಯ. ಹಾಲು ಹೋದ್ರೆ ಹೋಯ್ತು. ನಿಂಗೆ ನಾಗದೋಷ ಇದ್ದಿದ್ಕೆ ಹಾವು ಅಟ್ಟಿಸಿಕೊಂಡು ಬಂದಿದೆ. ನಾಗಪ್ಪ ತಪ್ಪಾಯ್ತು ಅಂತ ಮೂರು ಸಲ ಹೇಳು" ಎಂದು ಅವನಿಂದ ಹೇಳಿಸಿ, "ಎರಡು ತಿಂಗಳು ಪ್ರತಿ ಶನಿವಾರ ನಾಗದೇವರ ಕಲ್ಲಿಗೆ ತುಪ್ಪದ ದೀಪ ಹಚ್ಚಿಸ್ತೀನಿ ಅಂತ ಹರಕೆ ಹೊತ್ಕೊ" ಎಂದು ಹೇಳಿ ಕೊಟ್ಟರು. ಹುಡುಗನೂ ಆಯ್ತೆಂದು ಒಪ್ಪಿಕೊಂಡು ಬಿಟ್ಟ.

ಈ ವಿಷಯ ಹುಡುಗನ ತಾಯಿ ಬೂವಮ್ಮನಿಗೆ ಗೊತ್ತಾಗಿ ಅದು ನ್ಯಾಯ ಕೇಳಲು ಬಂತು. "ನಮ್ಮ ಜಾತೀಲಿ ನಾಗಪ್ಪಂದು ಪೂಜೆ ಪುನಸ್ಕಾರ ಎಲ್ಲೈತೆ ಜಯಕ್ಕ. ತಿಳಿಯದ ಹುಡುಗುಂಗೆ ಹರಕೆ ಹೊತ್ತಿಸಿ ಬಿಟ್ರಲ್ಲ. ಈಗೇನ್ಮಾಡೋದು ಹೇಳಿ. ನಮ್ಮ ದೇವ್ರಿಗೆ ಇದು ಆಗ್ಬರಾಕಿಲ್ಲ ಗೊತ್ತಾ?'' ಎಂದು ತಕರಾರು ತೆಗೆಯಿತು.

"ಏಯ್ ಬೂವಮ್ಮ, ಎಲ್ಲಾ ಮನುಷ್ಯರಿಗೂ ಒಂದೇ ದೇವ್ರು ತಿಳ್ಕ. ನಾಗಪ್ಪ ನಾಗಪ್ಪಾನೆ. ಅವನ ಕೋಪ ಒಳ್ಳೇದಲ್ಲ. ತಪ್ಪಾಯ್ತು ತಪ್ಪಾಯ್ತು ಅಂತ ಮೂರು ಸಲ ಕೆನ್ನೆ ಮೇಲೆ ಹೊಡ್ಕೊ. ನಿನ್ನ ಮಗನ ದೋಷ ಇರಾದಕ್ಕೆ ಕಾಣಿಸಿಕೊಂಡವನೆ. ತುಪ್ಪದ ದೀಪ ಅವನಲ್ಲದಿದ್ರೆ ನಾನೇ ಹಚ್ತೀನಿ. ಹರಕೇನೆ ಹೊತ್ಕೊಂಡು ಪೂರೈಸಲಿಲ್ಲಾಂದ್ರೆ ಯಾವ ದೇವರೂ ಸುಮ್ನೆ ಬಿಡಾದಿಲ್ಲ ಬೂವಮ್ಮ. ಇರೋನೊಬ್ಬನೇ ಮಗ. ಅದ್ಯಾಕೆ ಚೌಕಾಶಿ ಮಾತಾಡ್ತಿ. ಹಾವು ಜಾತಿ ಧರ್ಮ ನೋಡಿ ಕಚ್ಚೋದಿಲ್ಲ. ಮೈಗತ್ತಿದ ವಿಷ ಮನುಷ್ಯನ ಕೊಲ್ಲೊ ತಂಕ ಬಿಡಲ್ಲ. ನಾಗದೇವ್ರುನ್ನ ಅಷ್ಟು ಹಗುರ ತಿಳ್ಕೊಬ್ಯಾಡ. ನಾನೂ ನಿಮ್ಮ ಅಲ್ಲಾ ದೇವ್ರು ಕೂಗೋ ಹೊತ್ತಿಗೆ ಕೈ ಮುಗಿದು ಎಲ್ರುನ್ನೂ ಸಾಕಿ ಸಲಹಿ ಕಾಪಾಡಪ್ಪ ದೇವ್ರೆ ಅಂತ ಕೇಳ್ಕಳೋದಿಲ್ವಾ?" ಎಂದು ಬೂವಮ್ಮನ ಬಾಯಿಗೆ ಬೀಗ ಹಾಕಿದರು. ಜಯಮ್ಮನ ಮಾತಿಗೆ ಕಕ್ಕಾಬಿಕ್ಕಿಯಾದ ಬೂವಮ್ಮ, "ಅದೇನೋ ನೀವು ತಿಳ್ದಂಗೆ ಮಾಡಿ. ನನ್ಮಾತು ತಪ್ಪಾಗಿದ್ರೆ ಆ ದೇವ್ರೇ ಕಾಪಾಡಲಿ" ಎಂದಳು. ಅಸಲಿಗೆ ಯಾವ ದೇವರು ಯಾರನ್ನು ಕಾಪಾಡಬೇಕು ಎಂಬ ವಿಷಯದಲ್ಲಿ ಅವಳಿಗೂ ಗೊಂದಲ ಹುಟ್ಟಿಕೊಂಡಿತ್ತು.



**ಕಲೀಮ್ ಉಲ್ಲಾ**

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರಾದ ಕಲೀಮ್ ಕತೆ, ಪ್ರಬಂಧ, ಅಂಕಣ ಬರಹಗಳಿಂದ ಗುರುತಿಸಿಕೊಂಡಿದ್ದಾರೆ. ಪ್ರಕಟಿತ ಪುಸ್ತಕಗಳು: 'ಕ್ಲಾಸ್ ಟೀಚರ್', 'ಬಾಡೂಟದ ಮಹಿಮೆ'. ಪ್ರಸ್ತುತ ಅವರು ಶಿವಮೊಗ್ಗದಲ್ಲಿ ಕನ್ನಡ ಅಧ್ಯಾಪಕರು.